740

# ಕರ್ನಾಟಕ ಸರ್ಕಾರದ ನಡಾವಳಿಗಳು.

**ವಿಷಯ:-** ಶ್ರೀ ಎಲ್.ಹೆಚ್.ಹನುಮಂತಪ್ಪ, ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಲಿಂಗಸೂಗೂರು, ರಾಯಚೂರು ಜಿಲ್ಲೆ, ಇವರ ವಿರುದ್ಧ ದಾಖಲಾಗಿರುವ ಅಕ್ರಮ ಆಸ್ತಿ ಹೊಂದಿರುವ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

**ಓದಲಾಗಿದೆ:-**

1. ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತರು, ಬೆಂಗಳೂರು ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಜಿ-14/ಸಿಆರ್-5/2009/ ರಾಯಚೂರು ದಿನಾಂಕ: 28-03-2009.
2. ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತರು, ಬೆಂಗಳೂರು ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಜಿ-14/ಸಿಆರ್-5/2009/ ರಾಯಚೂರು ದಿನಾಂಕ: 28-03-2013.

**ಪ್ರಸ್ತಾವನೆ:-**

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1)ರ ದಿನಾಂಕ:28-03-2009ರ ಪತ್ರದಲ್ಲಿ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರು, ಶ್ರೀ ಎಲ್.ಹೆಚ್. ಹನುಮಂತಪ್ಪ ಹಿಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಲಿಂಗಸೂಗೂರು ರಾಯಚೂರು ಜಿಲ್ಲೆ ಇವರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕಿಂತ ಹೆಚ್ಚಿನ ಸಂಪತ್ತನ್ನು ಹೊಂದಿರುತ್ತಾರೆಂಬ ನಂಬಲರ್ಹ ಮಾಹಿತಿ ಆಧಾರದ ಮೇಲೆ, ಅವರ ವಿರುದ್ಧ ಕರ್ನಾಟಕ ಲೋಕಾಯುಕ್ತ ರಾಯಚೂರು, ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:5/2009ನ್ನು ಕಲಂ.13[1][ಇ] ಸಹ ವಾಚನ 13[2] ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಅನ್ವಯ ಪ್ರಕರಣವನ್ನು ದಿನಾಂಕ:17-03-2009ರಂದು ದಾಖಲಿಸಿಕೊಂಡು, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಯಚೂರು ರವರಿಂದ ದಿನಾಂಕ:17-03-2009ರಂದು ಶೋಧನ ಆದೇಶವನ್ನು (Search Warrant) ಪಡೆದುಕೊಂಡು ದಾಳಿ ನಡೆಸಿ, ಈ ಕೆಳಕಂಡ ಪಂಚ ಸಾಕ್ಷಿಗಳ ಸಮಕ್ಷಮ ಸದರಿಯವರ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಶೋಧಿಸಲಾಗಿದ್ದು, ಪ್ರಾಥಮಿಕ ತನಿಖೆಯಿಂದ ತಮ್ಮ ಬಲ್ಲ ಮೂಲಗಳ ಆದಾಯಕ್ಕಿಂತ ಶೇಕಡಾ 90.76ರಷ್ಟು ಅಕ್ರಮ ಆಸ್ತಿ ಹೊಂದಿರುವುದು ತನಿಖೆಯಿಂದ ಕಂಡು ಬಂದಿರುತ್ತದೆ ಎಂಬುದಾಗಿ ವರದಿ ಮಾಡಿರುವರು.

1. ಶ್ರೀ ಭೀಮಣ್ಣ ತಂದೆ ಮಾರಪ್ಪ ಉಪ್ಪಾರ 32 ವರ್ಷ ಬಿಲ್ ಕಲೆಕ್ಟರ್, ನಗರಸಭೆ ಕಾರ್ಯಾಲಯ, ಕೊಪ್ಪಳ ಸಾ: ಯರಮರಸ್, ರಾಯಚೂರು ಜಿಲ್ಲೆ.

2. [illegible]

3. ಶ್ರೀಮತಿ ನಿರ್ಮಲಾ ಗಂಡ ಬಸವರಾಜ್ ಗದಿಗೇರಿ 29 ವರ್ಷ, ದ್ವಿತಿಯ ದರ್ಜೆ ಸಹಾಯಕರು, ಸಹಾಯಕ ನಿಬಂಧಕರು, ಕೋಆಪರೇಟಿವ್ ಸೂಸೈಟಿಸ್, ಕೊಪ್ಪಳ, ಸಾ: ಮುಧೋಳ, ತಾ: ಕೊಪ್ಪಳ.

ಮೇಲ್ಕಂಡ ಪಂಚರ ಸಮಕ್ಷಮ ದಿನಾಂಕ:*18-03-2009*ರಂದು ಆಪಾದಿತರ ಮನೆ ಮೇಲೆ ದಾಳಿ ಮಾಡಿದ್ದು, ಅಪಾದಿತರು ಅವರ ಆದಾಯಕ್ಕಿಂತ ಹೆಚ್ಚಿಗೆ ಅಕ್ರಮ ಆಸ್ತಿ ಹೊಂದಿರುವರೆಂದು ಪ್ರಾಥಮಿಕ ತನಿಖೆಯಿಂದ ಮೇಲ್ನೋಟಕ್ಕೆ ಕಂಡು ಬಂದಿದ್ದು, ಅಪಾದಿತರು ಲಂಚ ನಿರೋಧ....ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ರಡಿಯಲ್ಲಿ ಅಪರಾಧವೆಸಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ ಎಂದು ಲೋಕಾಯುಕ್ತರು, ತಮ್ಮ ಪತ್ರದಲ್ಲಿ ತಿಳಿಸಿ, ಸದರಿ ಅಧಿಕಾರಿಯವರು ಪ್ರಾಸಿಕ್ಯೂಶನ್ ಸಾಕ್ಷಿಗಳ ನಾಶ ಮಾಡುವ ಸಂಬವ ಇರುವುದರಿಂದ, ಸದರಿಯವರ ಲೀನನ್ನು ಬದಲಾಯಿಸಿ, ಸರ್ಕಾರಿ ಸೇವೆಯಿಂದ ನಿಲಂಬನೆಗೊಳಿಸುವಂತೆ ಸದರಿ ಪತ್ರದಲ್ಲಿ ಕೋರಿದ್ದು, ಅವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಆರೋಪಿತ ಅಧಿಕಾರಿಯವರು ಅಕ್ರಮ ಆಸ್ತಿ ಹೊಂದಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಅಪಾದಿತ ಅಧಿಕಾರಿಯವರನ್ನು ಲೀನನ್ನು ಬದಲಾಯಿಸಿ, ದಿನಾಂಕ:04-06-2009ರಂದು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ ಮತ್ತು ದಿನಾಂಕ:17-10-2011ರಂದು, ಸದರಿ ಅಧಿಕಾರಿಯವರ ಮೇಲಿನ ಲೋಕಾಯುಕ್ತ ಕ್ರೀಮಿನಲ್ ಪ್ರಕರಣವನ್ನು ಬಾಕಿಯಿರಿಸಿ, ಸೇವೆಗೆ ಪುನರ್ ನೇಮಕ ಮಾಡಲಾಯಿತು.

ಮೇಲೆ ಓದಲಾದ ಕ್ರ.ಸಂ.(2)ರ ಪತ್ರದಲ್ಲಿ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಶ್ರೀ ಎಲ್. ಹೆಚ್. ಹನುಮಂತಪ್ಪ, ಹಿಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಲಿಂಗಸೂಗೂರು, ರಾಯಚೂರು ಜಿಲ್ಲೆ, ಇವರ ಮೇಲಿರುವ ಅಕ್ರಮ ಆಸ್ತಿ ಹೊಂದಿರುವ ಕುರಿತು, ಕೂಲಂಕಷವಾಗಿ ತನಿಖೆ ನಡೆಸಿ, ಒಟ್ಟು ಆಸ್ತಿ ಮತ್ತು ಖರ್ಚುಗಳ ಮೊತ್ತ ಹಾಗೂ ಒಟ್ಟು ಆದಾಯವನ್ನು ಲೆಕ್ಕ ಹಾಕಲಾಗಿ ಅವರು ತಮ್ಮ ಒಟ್ಟು ಆದಾಯಕ್ಕಿಂತ ರೂ.89,17,771/- ಗಳ ಅಸಮತೋಲನಾ ಆಸ್ತಿ ಹೊಂದಿರುವರೆಂದು ತಿಳಿಸಿ ತನಿಖಾಧಿಕಾರಿಯವರ ಅಂತಿಮ ವರದಿಯ ಪ್ರತಿ, ಅದರ ಅಡಕಗಳಾದ ಪ್ರಥಮ ವರ್ತಮಾನ ವರದಿ, ಶೋಧನಾ ಪಂಚನಾಮಗಳು ಮತ್ತು ತನಿಖಾ ದಾಖಲಾತಿಗಳ

ನಕಲುಗಳನ್ನು ಸರ್ಕಾರಕ್ಕೆ ಕಳುಹಿಸಿ, ಆರೋಪಿತರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ, ಘನ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಈ ಪ್ರಕರಣದಲ್ಲಿ ತನಿಖಾಧಿಕಾರಿಯವರು ನೀಡಿದ ಎಲ್ಲಾ ದಾಖಲೆಗಳನ್ನು ಪರೀಕ್ಷಿಸಲಾಯಿತು. ಅದರಂತೆ ಆರೋಪಿತ ಅಧಿಕಾರಿಯವರ ಸ್ಥಿರಾಸ್ತಿ ಹಾಗೂ ಚರಾಸ್ತಿಯನ್ನು ಪಟ್ಟಿ ಮಾಡಿ, ತುಲನಾತ್ಮಕವಾಗಿ ಅವಲೋಕಿಸಿದಾಗ ಅವರು ತಮ್ಮ ಆದಾಯಕ್ಕಿಂತ ಹೆಚ್ಚಿಗೆ ಅಕ್ರಮ ಆಸ್ತಿಯನ್ನು ಹೊಂದಿರುವುದು, ತನಿಖಾಧಿಕಾರಿಗಳು, ನೀಡಿದ ದಾಖಲೆಗಳ ಆಧಾರದ ಮೇಲೆ ಮೆಲ್ನೋಟಕ್ಕೆ ಕಂಡು ಬಂದಿರುವುದರಿಂದ ಶ್ರೀ ಎಲ್. ಹೆಚ್. ಹನುಮಂತಪ್ಪ ಹಿಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಲಿಂಗಸೂಗೂರು, ಇವರನ್ನು ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಅಭಿಯೋಜನಾ ಮಂಜೂರಾತಿ ನೀಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ:ಕೃಇ 31 ಕೃಪವಿ 2009,**

**ಬೆಂಗಳೂರು, ದಿನಾಂಕ: 07-10-2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಎಲ್. ಹೆಚ್. ಹನುಮಂತಪ್ಪ ಹಿಂದಿನ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಲಿಂಗಸೂಗೂರು ಇವರು ಅಕ್ರಮ ಆಸ್ತಿ ಹೊಂದಿ ಲಂಚ ನಿರೋದ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ರಡಿಯಲ್ಲಿ ಅಪರಾಧವೆಸಗಿರುವುದರಿಂದ ಇವರ ವಿರುದ್ಧ ಲಂಚ ನಿರೋದ ಕಾಯ್ದೆ 1988 ರ ಕಲಂ 19 (1) (ಸಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ, ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಅಭಿಯೋಜನಾ ಮಂಜೂರಾತಿ ನೀಡಿದೆ.

ಮುಂದುವರೆದು ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಾಗುತ್ತದೆ.

--4--

ಅದೇ ನಿಯಮಾವಳಿಯ ನಿಯಮ-19(1)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯವರ ಸಹಿಯಿಂದ ಅಧಿಕೃತಗೊಳ್ಳಬೇಕು. ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಛೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯವರ ಸಹಿಯ ಅಡಿಯಲ್ಲಿ ದಿನಾಂಕ:07ನೇ ಅಕ್ಟೋಬರ್ 2013ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:-**

1. ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ.**

1. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿಭವನ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.